# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

**ಅಧ್ಯಾಯ-1**

**ಸಂಸ್ಥೆ, ಕಾರ್ಯಗಳು ಮತ್ತು ಕರ್ತವ್ಯಗಳು**

**[ಪ್ರಕರಣ 4(1) (ಬಿ)(i)]**

**ಮಾಹಿತಿ ಹಕ್ಕು ಅಧಿನಿಯಮ ಕಲಂ 4(1)(ಬಿ) ಅಡಿಯಲ್ಲಿ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ತಿಳುವಳಿಕೆಗಾಗಿ ಈ ಕೆಳಗಿನಂತೆ ಪ್ರಕಟಿಸಲಾಗಿದೆ.**

**<u>ಸಂಸ್ಥೆಯ ರಚನೆ</u>**

**ಹೆಸರು :** ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

**ವಿಳಾಸ :** 2, 3 ಮತ್ತು 4ನೇ ಮಹಡಿ, 5ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01

**ಆಯೋಗದ ವಿವರಗಳು**

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವು ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ 1993ರ ಪ್ರಕರಣ 21 ರನ್ವಯ ಸ್ಥಾಪಿಸಲ್ಪಟ್ಟ ಶಾಸನಬದ್ಧ ಸಂಸ್ಥೆಯಾಗಿರುತ್ತದೆ. ಸದರಿ ಅಧಿನಿಯಮದಂತೆ ರಾಜ್ಯ ಆಯೋಗವು ಓರ್ವ ಅಧ್ಯಕ್ಷರನ್ನು ಮತ್ತು ಇಬ್ಬರು ಸದಸ್ಯರುಗಳನ್ನು ಒಳಗೊಂಡಿದೆ. ಅವರುಗಳನ್ನು ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ 1993ರ (ಈ ಮುಂದೆ ಅಧಿನಿಯಮವೆಂದು ಹೇಳಿದೆ) ಪ್ರಕರಣ 22 (1) ರಂತೆ ರಚಿಸಲಾದ ಸಮಿತಿಯ ಶಿಫಾರಸ್ಸಿನ ಮೇರೆಗೆ ರಾಜ್ಯಪಾಲರು ನೇಮಕಾತಿ ಮಾಡುತ್ತಾರೆ. ಆಯೋಗವು ದಿನಾಂಕ: 25/7/2007ರಂದು ಅಸ್ಥಿತ್ವಕ್ಕೆ ಬಂದಿದೆ.

ಆಯೋಗದ ಗೌರವಾನ್ವಿತ ಅಧ್ಯಕ್ಷರು ಮತ್ತು ಗೌರವಾನ್ವಿತ ಸದಸ್ಯರುಗಳ ವಿವರಗಳು ಕೆಳಕಂಡಂತಿದೆ.

| | | | |
|---|---|---|---|
| 1 | ಮಾನ್ಯ ಶ್ರೀ ಡಿ.ಹೆಚ್. ವಘೇಲ ನಿವೃತ್ತ ಮುಖ್ಯ ನ್ಯಾಯಾಧೀಶರು ಉಚ್ಚ ನ್ಯಾಯಾಲಯ ಕರ್ನಾಟಕ, ಒಡಿಶಾ ಮತ್ತು ಮುಂಬೈ. | ಗೌರವಾನ್ವಿತ ಅಧ್ಯಕ್ಷರು | ಸರ್ಕಾರದ ಅಧಿಸೂಚನೆ ಸಂಖ್ಯೆ: ಲಾ 42 ಹೆಚ್‌ಆರ್‌ಸಿ 2017-18, ದಿನಾಂಕ 5/2/2018 ರಲ್ಲಿ ನೇಮಿಸಲಾಗಿದ್ದು, ದಿನಾಂಕ 12/3/2018 ರಂದು ಕಾರ್ಯಭಾರ ವಹಿಸಿಕೊಂಡಿರುತ್ತಾರೆ |
| 2 | ಮಾನ್ಯ ಶ್ರೀ ಕೆ.ಬಿ. ಚಂಗಪ್ಪ ನಿವೃತ್ತ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು | ಗೌರವಾನ್ವಿತ ಸದಸ್ಯರು | ಸರ್ಕಾರದ ಅಧಿಸೂಚನೆ ಸಂಖ್ಯೆ: ಲಾ 42 ಹೆಚ್‌ಆರ್‌ಸಿ 2017-18, ದಿನಾಂಕ 15/2/2018ರಲ್ಲಿ ನೇಮಿಸಲಾಗಿದ್ದು, ದಿನಾಂಕ 19/2/2018ರಂದು ಕಾರ್ಯಭಾರ ವಹಿಸಿಕೊಂಡಿರುತ್ತಾರೆ. |
| 3 | ಮಾನ್ಯ ಶ್ರೀ ಆರ್.ಕೆ. ದತ್ತ, ಐ.ಪಿ.ಎಸ್., ನಿವೃತ್ತ ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾನಿರೀಕ್ಷಕರು | ಗೌರವಾನ್ವಿತ ಸದಸ್ಯರು | ಸರ್ಕಾರದ ಅಧಿಸೂಚನೆ ಸಂಖ್ಯೆ:ಲಾ 42 ಹೆಚ್‌ಆರ್‌ಸಿ 2017-18, ದಿನಾಂಕ 15/2/2018 ರಲ್ಲಿ ನೇಮಿಸಲಾಗಿದ್ದು. ದಿನಾಂಕ 26/2/2018 ರಂದು ಕಾರ್ಯಭಾರ ವಹಿಸಿಕೊಂಡಿರುತ್ತಾರೆ. |

**ಆಯೋಗದ ಕಾರ್ಯಗಳು**

**ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮದಡಿ ಉಪಬಂಧಿಸಿದಂತೆ ಆಯೋಗವು ಈ ಕೆಳಕಾಣಿಸಿದ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿದೆ. ಅವುಗಳೆಂದರೆ;**

ಎ) ಆಯೋಗವು ಸ್ವಯಂಪ್ರೇರಿತವಾಗಿ ಅಥವಾ ಮಾನವ ಹಕ್ಕುಗಳ ಉಲ್ಲಂಘನೆಗೊಳಗಾದ ವ್ಯಕ್ತಿ ಅಥವಾ ಅವರ ಪರವಾಗಿ ಯಾವುದೇ ವ್ಯಕ್ತಿ ಅಥವಾ ಯಾವುದೇ ನ್ಯಾಯಾಲಯದ ನಿರ್ದೇಶನ ಅಥವಾ ಆದೇಶದಂತೆ:-

  i) ಮಾನವ ಹಕ್ಕುಗಳ ಉಲ್ಲಂಘನೆ ಅಥವಾ ಅದಕ್ಕೆ ಪ್ರಚೋದನೆ ನೀಡಿದಾಗ;

  ii) ಸಾರ್ವಜನಿಕ ನೌಕರರು ಅಂತಹ ಉಲ್ಲಂಘನೆ ತಡೆಯದೇ ನಿರ್ಲಕ್ಷ್ಯ ವಹಿಸಿರುವ ಬಗ್ಗೆ ನೀಡಿದ ದೂರಿನ ಮೇಲೆ ಕ್ರಮ ಜರುಗಿಸುವುದು;

ಬಿ) ಮಾನವ ಹಕ್ಕುಗಳ ಉಲ್ಲಂಘನಾ ಪ್ರಕರಣ ಇತ್ಯರ್ಥವಾಗದೆ ನ್ಯಾಯಾಲಯದಲ್ಲಿ ಉಳಿದಿದ್ದರೆ ಯಾವುದೇ ವ್ಯವಹರಣೆಗಳಲ್ಲಿ ಆ ನ್ಯಾಯಾಲಯಗಳ ಒಪ್ಪಿಗೆ ಪಡೆದು ಪ್ರಕರಣದಲ್ಲಿ ಭಾಗಿಯಾಗುವುದು;

ಸಿ) ರಾಜ್ಯ ಸರ್ಕಾರದ ನಿಯಂತ್ರದಲ್ಲಿರುವ ಸೆರೆಮನೆ ಅಥವಾ ಇತರೆ ಸಂಸ್ಥೆಗಳಲ್ಲಿ ಬಂಧನದಲ್ಲಿ ಅಥವಾ ಉಪಚಾರ, ಸುಧಾರಣೆ, ಸಂರಕ್ಷಣೆಗಾಗಿ ದಾಖಲಾದ ವ್ಯಕ್ತಿಗಳು ವಾಸ ಮಾಡುವ ಸ್ಥಿತಿಗಳನ್ನು ಅಧ್ಯಯನಕ್ಕಾಗಿ ಭೇಟಿ ನೀಡಿ ಅವುಗಳನ್ನು ಅಭಿವೃದ್ಧಿಪಡಿಸಲು ಸರ್ಕಾರಕ್ಕೆ ಶಿಫಾರಸ್ಸುಗಳನ್ನು ಮಾಡುವುದು;

ಡಿ) ಮಾನವ ಹಕ್ಕುಗಳ ಸಂರಕ್ಷಣೆಗಾಗಿ ಸಂವಿಧಾನದಲ್ಲಿ ಅಥವಾ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನಲ್ಲಿ ಅಡಕವಾದ ಸಂರಕ್ಷಣಾ ವಿಧಿಗಳನ್ನು ವಿಮರ್ಶಿಸುವುದು ಮತ್ತು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕೆ ಕ್ರಮಗಳನ್ನು ಶಿಫಾರಸ್ಸು ಮಾಡುವುದು;

ಇ) ಮಾನವ ಹಕ್ಕುಗಳನ್ನು ಅನುಭವಿಸಲು ಭಯೋತ್ಪಾದನಾ ಕೃತ್ಯಗಳು ಸೇರಿದ ಅಂಶಗಳನ್ನು ತೊಡಕುಗಳನ್ನು ಪರಿಶೀಲಿಸಿ ಅವುಗಳಿಗೆ ಸೂಕ್ತ ಪರಿಹಾರೋಪಾಯಗಳನ್ನು ಶಿಫಾರಸ್ಸು ಮಾಡುವುದು;

ಎಫ್) ಮಾನವ ಹಕ್ಕುಗಳಿಗೆ ಸಂಬಂಧಿಸಿದ ಒಡಂಬಡಿಕೆಗಳು ಮತ್ತು ಇತರೆ ಅಂತರಾಷ್ಟ್ರೀಯ ಲಿಖಿತ ಪತ್ರಗಳನ್ನು ಅಭ್ಯಸಿಸಿ, ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಬಗ್ಗೆ ಶಿಫಾರಸ್ಸು ಮಾಡುವುದು.

ಜಿ) ಮಾನವ ಹಕ್ಕುಗಳ ಕ್ಷೇತ್ರದಲ್ಲಿ ಸಂಶೋಧನೆ ಕೈಗೊಳ್ಳುವುದು ಮತ್ತು ಉತ್ತೇಜನ ನೀಡುವುದು;

ಹೆಚ್) ಸಮಾಜದ ವಿವಿಧ ವರ್ಗಗಳಲ್ಲಿ ಮಾನವ ಹಕ್ಕುಗಳ ಸಂರಕ್ಷಣೆಗಾಗಿ ಲಭ್ಯವಿರುವ ಭದ್ರತೆ ಬಗ್ಗೆ ಪ್ರಕಟಣೆಗಳು, ಮಾಧ್ಯಮಗಳು, ಸೆಮಿನಾರ್ ಮತ್ತು ಇತರೆ ಲಭ್ಯವಿರುವ ಸಾಧನಗಳ ಮೂಲಕ ಅರಿವನ್ನು ಮೂಡಿಸುವುದು;

ಐ) ಮಾನವ ಹಕ್ಕುಗಳ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಸರ್ಕಾರೇತರ ಸಂಘ ಸಂಸ್ಥೆಗಳ (ಎನ್.ಜಿ.ಓಸ್) ಪ್ರಯತ್ನಗಳಿಗೆ ಉತ್ತೇಜನ ನೀಡುವುದು;

ಜೆ) ಮಾನವ ಹಕ್ಕುಗಳ ವೃದ್ಧಿಗಾಗಿ ಅವಶ್ಯವೆಂದು ಪರಿಗಣಿಸುವ ಇತರೆ ಕಾರ್ಯಗಳು.